ಮೂಲ ದಾವಾ ಸಂಖ್ಯೆ 251/2014 ಪಿ ಡಬ್ಲ್ಯೂ 4 ಎಸ್ ಹಾಲೇಶ್ ಬಿನ್ ಲೇಟ್ ರಾಮಣ್ಣ

(ದಿನಾಂಕ 07.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಎಸ್ ಜಿ ವಕೀಲರಿಂದಃ-</u>

ನಾನು ಬಿ ಎ ಪದವಿಧರ. ನನಗೆ ಸಾಕ್ಷಿ ಹೇಳಲು ನ್ಯಾಯಾಲಯ ದಿಂದ ಸಮನ್ಸ ಬಂದಿತ್ತು. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ಕನ್ನಡ ಭಾಷೆಯಲ್ಲಿ ಮಾಹಿತಿಯನ್ನು ಕೊಟ್ಟಿದ್ದು ವಕೀಲರು ಇಂಗ್ಲೀಷ್ ಭಾಷೆಯಲ್ಲಿ ಬರೆಸಿರುತ್ತಾರೆ. ನಾನು ಬಂದ ನಂತರ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಬರೆಯಲಾಯಿತು. ನಾನು 40 ವರ್ಷಗಳಿಂದ ದಸ್ತವೇಜು ಬರೆಯುವ ಕೆಲಸ ವನ್ನು ಮಾಡುತ್ತಿದ್ದೇನೆ. ಸಾಮಾನ್ಯವಾಗಿ ನನ್ನ ಕಡೆ ಪತ್ರ ಬರಹ ಮಾಡಿಕೊಳ್ಳಲು ಬರುವಂತಹ ಸಾರ್ವಜನಿಕರು ಅಷ್ಟಾಗಿ ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ಪತ್ರ ಬರಹ ಮಾಡುವಾಗ ದಾಖಲಾತಿಗಳನ್ನು ಹಾಗೂ ಅವರ ಗುರುತಿನ ದಾಖಲಾತಿಗಳನ್ನು ನೋಡಿ ಬರೆಯಲಾಗುತ್ತದೆ ಎಂದರೆ ಸರಿ. ದಿನಾಂಕ 13.12.2011 ರಂದು ಕೇವಲ ಪತ್ರವನ್ನು ಮಾತ್ರ ನನ್ನ ಮೂಲಕ ಬರೆಸಲಾಗಿರುತ್ತದೆ. ನನ್ನ ಮುಂದೆ ಯಾವುದೇ ಸದರಿ ನಿ. ಪಿ. 1 ಕ್ಕೆ ಸಂಬಂಧಪಟ್ಟಂತೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲವೆಂದರ ಸರಿ. ಸಾಮಾನ್ಯವಾಗಿ ದಸ್ತವೇಜಿನ ಪುಟಗಳು ಮುಗಿದಲ್ಲಿ, ಒಂದುವೇಳೆ ಮತ್ತೇ ದಸ್ತವೇಜಿನ ಪುಟಗಳು ಬೇಕಾದಲ್ಲಿ ಬೇರೊಂದು ಹಾಳೆಯಲ್ಲಿ ಬರೆಸಲಾಗುತ್ತದೆಂದರೆ ಸರಿ. ಆ ರೀತಿ ಮಾಡಿದ್ದಲ್ಲಿ ಷರವನ್ನು ಬರೆಯಲಾಗುತ್ತದೆ ಎಂದರೆ ಸರಿ. ದಿನಾಂಕ 13.12.2011 ರಂದು ಮಾಡಲಾದಂತಹ ದಸ್ತವೇಜಿನ ಎಲ್ಲಾ ಪುಟದಲ್ಲಿಯು ಬರೆಯಲಾಗಿತ್ತು ಎಂದರೆ ಸರಿ. ನಿ. ಪಿ. 1 ಕ್ಕೆ ಸಂಬಂಧಪಟ್ಟ ದಸ್ತವೇಜನ್ನು ತಯಾರು ಮಾಡಲು ಆ ಸಂಬಂಧ ದಾಖಲಾತಿಗಳನ್ನು ಪಡೆದುಕೊಳ್ಳಲಾಗಿತ್ತು ಎಂದರೆ ಸರಿ. ನಿ. ಪಿ. 1 ನ್ನು ತಯಾರು ಮಾಡುವಾಗ ಎಷ್ಟು ಪಹಣಿ ಗಳನ್ನು ಪಡೆಯಲಾಗಿತ್ತು ಎಂದು ಹೇಳಲು ಬರುವುದಿಲ್ಲ ಆದರೆ ಅವರು ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಗಳನ್ನು ಕೊಟ್ಟಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕಳಾಗಿರುವ ಬಗ್ಗೆ ನಾನು ಆರ್ ಟಿ ಸಿ ದಾಖಲಾತಿಯನ್ನು ನೋಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆಂದು ಬರೆಯಲಾಗಿರುತ್ತದೆಂದರೆ ಸರಿ. ಪಹಣಿ ದಾಖಲಾತಿಗಳ

ಆಧಾರದ ಮೇಲೆ ಸದರಿ ನಿ. ಪಿ. 1 ರ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದು ಬರೆಯಲಾಗಿರುತ್ತದೆ. ನಿ. ಪಿ. 1 ರ ದಾಖಲಾತಿಯನ್ನು ಮಾಡುವಾಗ ಎಂ ಆರ್ ಪ್ರತಿಗಳನ್ನು ನೋಡಿರುವುದಿಲ್ಲ. ಪಿತ್ರಾರ್ಜಿತ ಆಸ್ತಿ ಆಗಿರುವ ನಿ. ಪಿ. 1 ನ್ನು ಮಾಡುವಾಗ ಉಳಿದವರ ಸಹಿಗಳು ಬೇಕೆಂದು ನಾನು ಕೇಳಿರುವುದಿಲ್ಲ.

ಪ್ರಶ್ನೆ:- ಪತ್ರ ಬರೆಯುವಾಗ ಎಷ್ಟು ಜನ ಬಂದಿದ್ದರು?

ಉತ್ತರ:- ಬರೆಸಿ ಕೊಳ್ಳುವವರು, ಬರೆದುಕೊಟ್ಟವರು ಮತ್ತು ಸಾಕ್ಷಿದಾರರು ಬಂದಿದ್ದರು.

ಅವರು ಹೆಸರುಗಳನ್ನು ನನಗೆ ಈಗ ಹೇಳಲು ನೆನಪು ಇರುವುದಿಲ್ಲ. ಯಾವ ಸಮಯಕ್ಕೆ ಅವರೆಲ್ಲರೂ ನನ್ನ ಕಡೆಗೆ ಬಂದಿದ್ದರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ನನ್ನ ಬಳಿ ಬಂದು ಹೋದ ನಂತರ ನಿ. ಪಿ. 1 ರ ಬಾಂಡ್ ಪೇಪರನ್ನು ತಂದಿರುತ್ತಾರೆ. ನಿ ಪಿ 1 ರ ಸ್ವತ್ತಿನ ಆಸ್ತಿಯ ಸರ್ವೆ ನಂಬರ ಹಾಗೂ ವಿಸ್ತೀರ್ಣ ವನ್ನು ನಾನು ಪತ್ರ ನೋಡಿ ಹೇಳಬೇಕಾಗುತ್ತದೆ. ಪತ್ರ ಬರೆದುಕೊಡುವವರು ಮಾಹಿತಿಯನ್ನು ಕೊಡುತ್ತಾರೆ ಆದರೆ ಈಗ ನನಗೆ ಅವರ ಹೆಸರನ್ನು ಹೇಳಲು ನೆನಪು ಇರುವುದಿಲ್ಲ. ದಾಖಲಾತಿಗಳ ಕೊರತೆ ಇದ್ದಾಗ ಹಾಗೂ ದಾಖಲಾತಿಗಳು ಲಭ್ಯ ಇರದ ಸಂಧರ್ಭದಲ್ಲಿ ಕರಾರನ್ನು ಬರೆಯಲು ಆಗುವುದಿಲ್ಲವೆಂದರೆ ಸರಿ. ಕಚ್ಚಾ ತಯಾರಾದ ನಂತರ ಬಾಂಡ್ ಪೇಪರ್ ನಲ್ಲಿ ಬರೆಯಲಾಗಿರುತ್ತದೆ. ಪ್ರತಿಯೊಂದನ್ನು ಒಂದೇ ದಿನ ಬರೆಯಲಾಗಿತ್ತು. ಮೊದಲನೆ ಪುಟವನ್ನು ಅವರು ತಂದಿರುವಂತಹ ಬಾಂಡ ಪತ್ರದ ಮೇಲೆ ಬರೆಯಲಾಗಿತ್ತು . ನಿ ಪಿ 1 ರಲ್ಲಿ ಎರಡನೇ ಪುಟದ ಕೊನೆಯ ಸಾಲಿನಲ್ಲಿ ಮೂರು ವರ್ಷ ದ ಅವಧಿಯನ್ನು ಕೊಡಲಾಗಿತ್ತು ಎಂದರೆ ಸರಿ. ಮೂರು ವರ್ಷಗಳ ಅವಧಿಯನ್ನು ಪಕ್ಷಗಾರರು ಹೇಳಿದ ರೀತಿಯಲ್ಲಿ ಬರೆಯಲಾಗಿದೆ ಯಾವ ಕಾರಣಕ್ಕಾಗಿ ಅವಧಿ ನೀಡಲಾಗಿತ್ತು ಎಂದು ಗೊತ್ತಿರುವುದಿಲ್ಲ. ನಿ ಪಿ 1 ನ್ನು ಬರೆದುಕೊಟ್ಟ ಸಮಯದಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ದಾಖಲಾಗಿತ್ತು ಎಂದರೆ ಸರಿ. ಕ್ರಯ ಕರಾರಿನ ಸ್ವತ್ತಿನ ಆಸ್ತಿ  ಮೌಲ್ಯವನ್ನು ನನಗೆ ಹೇಳಲು ಆಗುವುದಿಲ್ಲ. ನಿ ಪಿ 1 ರ ಮೊದಲನೆ ಪುಟದಲ್ಲಿ ಬೆರಳಚ್ಚು ಮಾಡಿಸಲು ಬರುವುದಿಲ್ಲ. ಮೊದಲೇ ಹಣದ ಭದ್ರತೆಗಾಗಿ ಮಾಡಿದಂತಹ

ಮೂಲ ದಾವಾ ಸಂಖ್ಯೆ 251/2014 **ಪಿ ಡಬ್ಲ್ಯೂ 4 ಎಸ್ ಹಾಲೇಶ್ ಬಿನ್ ಲೇಟ್ ರಾಮಣ್ಣ**

ಕಾಗದ ಪತ್ರವನ್ನು ಬಿಟ್ಟು ನಂತರ ನೋಂದಣಿ ಸಮಯದಲ್ಲಿ ಕಾಗದ ಪತ್ರಗಳನ್ನು ಅದಲು ಬದಲು ಮಾಡಿ ನಿ ಪಿ 1 ನ್ನು ನೋಂದಾಯಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ವಾದಿಯ ಅಣ್ಣ ತಮ್ಮಂದಿರು ಪರಿಚಯ ಇರುವುದಿಲ್ಲ. ವಾದಿಯು ನಿ ಪಿ 1 ನ್ನು ಹೊರತುಪಡಿಸಿ ಬೇರೆ ಪತ್ರವನ್ನು ನನ್ನ ಬಳಿ ಬರೆಸಿರುವ ಬಗ್ಗೆ ಹೇಳಲು ನನಗೆ ನೆನಪು ಇರುವುದಿಲ್ಲ. ವಾದಿಯ ಮೇಲೆ ಶಾಮೀಲಾಗಿ ನಿ ಪಿ 1ರ ದಾಖಲಾತಿಯನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಪಟ್ಟ ಆಸ್ತಿಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಇರುವುದಿಲ್ಲ, ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ